"ನಾನು ಒಂದು ಲೆಕ್ಕ ಹೇಳ್ತೀನಿ, ಚಿಕ್ಕ ಬುದ್ಧಿಯವರಿಂದ ಉತ್ತರ ಹೇಳೋದಿಕ್ಕೆ ಆಗುತ್ತಾ?"

ನಾನು ಉತ್ಸಾಹದಿಂದ "ಹೂ, ಹೇಳಿ" ಎಂದೆ.

"ಕಾಲು ಕಾಸಿಗೆ ನಾಲ್ಕು ಕಾಲು ಬಾಳೆಕಾಯಿ. ಹಾಗಾದರೆ ಕಾಸಿಗೆಷ್ಟು ಬಾಳೆಕಾಯಿ? ಹೇಳಿ."

ಅದು ಯಾವುದೋ ಹಾಡಿನಂತೆ ಕೇಳಿತೇ ಹೊರತು ಲೆಕ್ಕದಂತೆ ಕಾಣಲಿಲ್ಲ. ತೋಟ್ಟಿ ಮಾಡುವವವರು ಹಾಸ್ಯ ಮಾಡುತ್ತಿದ್ದಾರೋ ಎಂದು ಸಂಶಯವಾಯಿತು. "ಒಂದೂ ಅರ್ಥವಾಗಲಿಲ್ಲವಲ್ಲ. ಮತ್ತೊಮ್ಮೆ ಹೇಳಿ" ಎಂದು ಕೇಳಿದೆ. ಅವರು ವ್ಯಂಗ್ಯವಾಗಿ ನಕ್ಕು, ಹೇಳಿದ್ದನ್ನೇ ಮತ್ತೆ ಹೇಳಿದರು.

"ಇದು ಲೆಕ್ಕ ಏನೂ ಅಲ್ಲ. ಯಾವುದೋ ಕೂತ್ತಿನ (ಬಯಲಾಟ) ಹಾಡಿನಂತೆ ಇದೆ" ಎಂದು ಎದ್ದೆ. "ಚಿಕ್ಕ ಸ್ವಾಮಿಗೆ ಸಂಶಯ ಆದ್ರೆ, ನಾನು ಹೇಳಿದ್ದನ್ನ ನಿಮ್ಮ ಮೇಷ್ಟ್ರ ಬಳಿ ಕೇಳಿ ತಿಳಿದುಕೊಳ್ಳಬಹುದಲ್ಲ..." ಎಂದು ಅವರು ಕೆಲಸವನ್ನು ನಿಲ್ಲಿಸಿಬಿಟ್ಟು ಕಲ್ಲಿನ ತುಣುಕುಗಳನ್ನೆಲ್ಲ ಬಾಚಿ ತೆಗೆದುಕೊಂಡು ಹೋಗಿ ಗೋಡೆಯ ಪಕ್ಕದಲ್ಲಿ ಹಾಕಿದರು. ಸಾಮಾನುಗಳನ್ನೆಲ್ಲ ಎತ್ತಿ ಗೋಣಿಚೀಲದೊಳಗೆ ಹಾಕಿ ಕಟ್ಟಿ ಅದನ್ನೂ ಪಕ್ಕಕ್ಕಿಟ್ಟರು. "ಸ್ವಾಮಿ ಲೆಕ್ಕಕ್ಕೆ ಉತ್ತರ ಏನಂತ ಯೋಚಿಸ್ತಾನೆ ಹೋಗಿ ಓದಿ, ನಾನು ಹಾಗೆ ಒಂದು ನಡಿಗೆ ಸುತ್ತಾಕ್ಕೊಂಡು ಬರ್ತೀನಿ" ಎಂದು ಬೇಲಿಯ ಕಡೆಗೆ ಹೋದರು. ನಾಲ್ಕು ಅಡಿ ನಡೆದ ನಂತರ ನಿಂತು "ಕೆರೆ ಯಾವ ಕಡೆ" ಎಂದು ಕೇಳಿದರು.

"ರಸ್ತೆಗೆ ಹೋಗಿ ಬಲಗಡೆ ತಿರುಗಿ ನಡೀಬೇಕು."

"ಸರಿ, ಸರಿ" ಎಂದು ತಲೆಯಾಡಿಸುತ್ತಾ ನಡೆದುಹೋದರು ಅವರು. ಅವರ ಲೆಕ್ಕವನ್ನು ನೆನಪುಮಾಡಿಕೊಳ್ಳಲು ಪ್ರಯತ್ನಿಸುತ್ತ ಕಲ್ಲಿನ ಮೇಲೆ ಕುಳಿತೆ. ಹೊತ್ತು ಹೋದದ್ದೇ ಗೊತ್ತಾಗಲಿಲ್ಲ. "ಏನೋ, ಬುದ್ಧನಿಗೆ ಜ್ಞಾನ ಹುಟ್ಟಿದಂತೆ, ಏನಾದರೂ ನಿನಗೆ ಹುಟ್ಟಿತೇನೋ?" ಎಂಬ ದನಿಗೂ ಮೇಲೆ ಬಂದು ಬಿದ್ದ ನೀರಿನ ಹನಿಗಳಿಗೂ ತಿರುಗಿದಾಗ ಚಿಕ್ಕ ಅತ್ತೆ. ಒಡೆಯದ ಮಣ್ಣಿನ ತೊಟ್ಟಿಯಲ್ಲಿ ಕರಗಿಸಿ ಹಿಂಡಿಯ ತಿನಿಸನ್ನು ಬೆರಸಿದ ನೀರನ್ನು ಹಸುವಿಗೆ ಕುಡಿಸುತ್ತ ನಿಂತಿರುವುದನ್ನು ನೋಡಿದೆ. "ಕಾಲು ಕಾಸಿನ ನಾಲ್ಕು ಕಾಸಿನ ಲೆಕ್ಕ ಸರಿಹೋಯ್ತೇನೋ?" ಎಂದು ಮತ್ತೆ ಅವಳು ಗೇಲಿಮಾಡಿದಳು. "ಅತ್ತೆ ಮತ್ತೊಮ್ಮೆ ಹಾಸ್ಯ ಮಾಡಿದರೆ, ಮೇಲೆ ಬಿದ್ದು ಕಚ್ಚಿಬಿಡ್ತೀನಿ" ಎಂದು ಅವಳ ಮುಂದೆ ಮುಖ ಕೊಂಕಿಸಿ ಒಳಗೆ ಹೋದೆ.

ತೊಟ್ಟಿಯವರು ಹೇಳಿದ ಲೆಕ್ಕವನ್ನು ಅಜ್ಜಿ, ಅತ್ತೆ, ಮಧ್ಯದ ಅತ್ತೆ, ಅಮ್ಮ ಎಲ್ಲರ ಬಳಿ ಹೇಳಿ ಉತ್ತರ ಹೇಳಲು ಕೇಳಿದೆ. ಯಾರಿಗೂ ಅದರ ಉತ್ತರ ತಿಳಿಯಲಿಲ್ಲ. "ಯಾವುದೋ ಕೂತ್ತು ಹಾಡಿನಂತೆ ಇದೆ ಕಣೋ. ಬೆಳಗ್ಗೆ ಕುಡುಮಿ ಮಾಮಾ ಹಾಲು ತೆಗೆದುಕೊಳ್ಳೋದಿಕ್ಕೆ ಬರ್ತಾರಲ್ವಾ, ಆಗ ಅವರ ಬಳಿ ಕೇಳು" ಎಂದು ಹೇಳಿದಳು ದೊಡ್ಡ ಅತ್ತೆ. ಚಿಮಣಿಗಳನ್ನು ಬೂದಿಹಾಕಿ ತೊಳೆದು ಸೀಮೆ ಎಣ್ಣೆ ಸುರಿದು ದೀಪ ಹತ್ತಿಸಿ ಇಟ್ಟಳು ಮಧ್ಯದ ಅತ್ತೆ. "ನಿಮ್ಮ ಅಪ್ಪ ಬಂದರೆ ಅವರ ಬಳಿ ಕೇಳೋ" ಎಂದಳು ಅಜ್ಜಿ. "ಅವರೇ? ಒಳ್ಳೆ ಉತ್ತರ ಹೇಳ್ತಾರೆ? ಇಪ್ಪತ್ತು ರೂಪಾಯಿಗೆ ಚಿಲ್ಲರೆ ಕೊಟ್ಟರೆ ಅದನ್ನ ನಲವತ್ತು ಸಲ ಎಣಿಸಿ ಎಣಿಸಿ ನೋಡುವವರಲ್ಲವೇ ಅವರು. ನಿನ್ನ ಲೆಕ್ಕಕ್ಕೆ ಉತ್ತರ ಹೇಳೇ ಮುಂದಿನ ಕೆಲಸ ಮಾಡ್ತಾರೆ" ಎಂದು ನಗದೆಯೇ ಹೇಳಿದಳು ಅಮ್ಮ. ಒಲೆಯ ಮೇಲಿದ್ದ ಅನ್ನದ ಪಾತ್ರೆಯನ್ನು ಮೆಲ್ಲಗೆ ಇಳಿಸಿ ಸೋರಿಸಲು ತಟ್ಟೆ ಇಟ್ಟು, ಅಗಲವಾದ ಬಾಯಿರುವ ಪಾತ್ರೆಯೊಳಗೆ ನೀರು ಇಳಿಯುವಂತೆ ಬಗ್ಗಿಸಿ ಹಿಡಿದು ತಲೆ ಎತ್ತಿದ ಮೇಲೆಯೇ ಅವಳ ತುಟಿಗಳಲ್ಲಿ ನಗು ಹರಡಿತು.

ಅಪ್ಪ ಬಂದು ಕೈಕಾಲುಗಳನ್ನು ತೊಳೆದುಕೊಂಡು ಊಟಕ್ಕೆ ಕುಳಿತರು. ಅಮ್ಮ ತಂದ ತಟ್ಟೆಯಲ್ಲಿದ್ದ